# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 776 |
| ಸದಸ್ಯರ ಹೆಸರು | ಶ್ರೀ ಕೆ. ಶಿವಕುಮಾರ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 10.03.2026 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಚಾಮರಾಜನಗರದಲ್ಲಿ ಎಷ್ಟು ಗಣಿಗಾರಿಕೆ ಪರವಾನಗಿ ಇವೆ; ಇದರಲ್ಲಿ ಅನಧಿಕೃತವಾಗಿ ಎಷ್ಟು ಗಣಿಗಾರಿಕೆ ನಡೆಯುತ್ತಿವೆ; ಯಾವ ಯಾವ ವಿಧದ ಗಣಿಗಾರಿಕೆ ನಡೆಯುತ್ತಿದೆ; | • ಚಾಮರಾಜನಗರ ಜಿಲ್ಲೆಯಲ್ಲಿ ಮುಖ್ಯ ಖನಿಜ ಗಣಿಗಾರಿಕೆಗೆ ಯಾವುದೇ ಗುತ್ತಿಗೆಗಳನ್ನು ಮಂಜೂರು ಮಾಡಿರುವುದಿಲ್ಲ.<br>• ಉಪ ಖನಿಜಗಳಾದ ಕಪ್ಪು ಅಲಂಕಾರಿಕ ಮತ್ತು ಕಟ್ಟಡ ಕಲ್ಲು/ ಮರಳು ಗಣಿಗಾರಿಕೆಗಾಗಿ 183 ಗುತ್ತಿಗೆ/ ಲೈಸೆನ್ಸ್ ಗಳನ್ನು 455-00 ಎಕರೆ ವಿಸ್ತೀರ್ಣದಲ್ಲಿ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಕಪ್ಪು ಅಲಂಕಾರಿಕ ಶಿಲೆ ಗಣಿಗಾರಿಕೆಗೆ 75 ಕಾರ್ಯಾನುಮತಿಗಳನ್ನು 211-17 ಎಕರೆ ಪ್ರದೇಶದಲ್ಲಿ ನೀಡಲಾಗಿದೆ.<br>• ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ 03 ವರ್ಷಗಳಲ್ಲಿ ಅನಧಿಕೃತವಾಗಿ ಉಪಖನಿಜ ಗಣಿಗಾರಿಕೆಯ ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಅಕ್ರಮ ಗಣಿ ಚಟುವಟಿಕೆ ನಡೆಸುತ್ತಿದ್ದವರ ವಿರುದ್ಧ ಎಂ.ಎಂ. (ಡಿ&ಆರ್) ಕಾಯ್ದೆ -1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮಗಳಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ವಿಧಿಸಿ ಸಂಗ್ರಹಿಸಲಾಗಿದ್ದು, ವಿವರ ಕೆಳಕಂಡಂತಿದೆ: |

| ವರ್ಷ | ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ | ವಿಧಿಸಿದ ದಂಡ ಮೊತ್ತ (₹ಲಕ್ಷಗಳಲ್ಲಿ) | ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ |
|---|---|---|---|
| 2023-24 | 14 | 31.51 | 5 |
| 2024-25 | 10 | 7.40 | 1 |
| 2025-26 (ಜನವರಿ-2026) | 8 | 10.78 | 0 |
| **ಒಟ್ಟು** | **32** | **49.69** | **6** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ರಾಜ್ಯದಲ್ಲಿ ನಡೆಯುತ್ತಿರುವ ಗಣಿಗಾರಿಕೆಯಿಂದ ಹಾಗೂ ಚಾಮರಾಜನಗರ ಜಿಲ್ಲೆಯಿಂದ ಸರ್ಕಾರಕ್ಕೆ ರಾಜಧನ ರೂಪದಲ್ಲಿ ಬರುತ್ತಿರುವ ಆದಾಯವೆಷ್ಟು; | • ರಾಜ್ಯದಲ್ಲಿ ನಡೆಯುತ್ತಿರುವ ಮುಖ್ಯ ಖನಿಜ ಹಾಗೂ ಉಪಖನಿಜಗಳ ಗಣಿಗಾರಿಕೆಯಿಂದ 2023-24 ರಿಂದ 2025-26 ನೇಸಾಲಿನ ಜನವರಿ ಅಂತ್ಯದವರೆಗೆ ಸಂಗ್ರಹಿಸಿರುವ ರಾಜಧನದ ವಿವರಗಳು:- |

**(ರೂ.ಕೋಟಿಗಳಲ್ಲಿ)**

| ಕ್ರ. ಸಂ. | ವರ್ಷ | ರಾಜಸ್ವ ಗುರಿ | | | ಸಂಗ್ರಹಿಸಿದ ರಾಜಧನ | | ಒಟ್ಟು ಸಂಗ್ರಹಣೆ | ಶೇಕಡಾ ವಾರು |
|---|---|---|---|---|---|---|---|---|
| | | ಒಟ್ಟು ಗುರಿ | ಮುಖ್ಯ ಖನಿಜ ಗುರಿ | ಉಪ ಖನಿಜ ಗುರಿ | ಮುಖ್ಯ ಖನಿಜ | ಉಪ ಖನಿಜ | | |
| 1. | 2022-23 | 6500.00 | 4300.00 | 2200.00 | 3841.55 | 2104.22 | 5945.77 | 91 |
| 2. | 2023-24 | 9000.00 | 5500.00 | 3500.00 | 5317.61 | 2003.98 | 7321.59 | 81 |
| 3. | 2024-25 | 9000.00 | 6130.00 | 2870.00 | 5852.37 | 1846.60 | 7698.97 | 86 |
| 4. | 2025-26 (ಜನವರಿ ಮಾಹೆಯವರೆಗೆ) | 6927.79 | 5003.40 | 1924.39 | 5439.95 | 1464.75 | 6904.70 | 99 |

- ಚಾಮರಾಜನಗರ ಜಿಲ್ಲೆಯಲ್ಲಿ ಮುಖ್ಯ ಖನಿಜ ಗಣಿಗಾರಿಕೆಗೆ ಯಾವುದೇ ಗುತ್ತಿಗೆಗಳನ್ನು ಮಂಜೂರು ಮಾಡಿರುವುದಿಲ್ಲ. ಉಪ ಖನಿಜಗಳ ಗಣಿಗಾರಿಕೆಯಿಂದ **2023-24** ರಿಂದ **2025-26**ನೇ ಸಾಲಿನ ಜನವರಿ ಅಂತ್ಯದವರೆಗೆ ಸಂಗ್ರಹಿಸಿರುವ ರಾಜಧನದ ವಿವರಗಳು:-

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ವರ್ಷ | ರಾಜಧನ | | |
|---|---|---|---|---|
| | | ಗುರಿ | ಸಾಧನೆ | ಶೇಕಡವಾರು |
| 1. | 2022-23 | 32.00 | 26.12 | 81 |
| 2. | 2023-24 | 100.00 | 33.75 | 34 |
| 3. | 2024-25 | 65.00 | 33.97 | 52 |
| 4. | 2025-26 (ಜನವರಿ ಮಾಹೆಯವರೆಗೆ) | 56.00 | 29.82 | 53 |

ಇ) ರಾಜ್ಯದ ಕರಿಕಲ್ಲು ಯಾವ ದೇಶಕ್ಕೆ ಹಾಗೂ ಎಷ್ಟು ಪ್ರಮಾಣದಲ್ಲಿ ರಫ್ತಾಗುತ್ತಿದೆ;

- ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ **2021-22**ನೇ ಸಾಲಿನಿಂದ **2025-26**ನೇ ಸಾಲಿನಲ್ಲಿ ರಫ್ತಾಗಿರುವ ಕಪ್ಪು ಅಲಂಕಾರಿಕ ಶಿಲೆ ಪ್ರಮಾಣ ಕೆಳಕಂಡಂತಿದೆ:

| ಕ್ರ. ಸಂ. | ವರ್ಷ | ರಫ್ತಿನ ಪ್ರಮಾಣ (ಮೆ.ಟನ್ ಗಳಲ್ಲಿ) |
|---|---|---|
| 1. | 2021-22 | 58354 |
| 2. | 2022-23 | 75225 |
| 3. | 2023-24 | 45903 |
| 4. | 2024-25 | 60836 |
| 5. | 2025-26 (ಫೆಬ್ರುವರಿ-2026 ಮಾಹೆಯವರೆಗೆ) | 52886 |

ಈ) ರಷ್ಯಾ, ಯುಕ್ರೇನ್, ಇರಾನ್ ಸೇರಿದಂತೆ ಜಾಗತಿಕವಾಗಿ ನಡೆಯುತ್ತಿರುವ ಯುದ್ಧದಿಂದ ಕರಿಕಲ್ಲು ರಫ್ತಿನ ಮೇಲೆ ಪರಿಣಾಮ ಬೀರಿದೆಯೇ; ಎಷ್ಟು ಪ್ರಮಾಣದ ರಫ್ತು ಕುಸಿದಿದೆ; ಇದರಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟ ಎಷ್ಟು?

- ಕರೋನ ಸಾಂಕ್ರಾಮಿಕ ರೋಗ ಹರಡುವಿಕೆಯಿಂದ ಚೀನಾ, ಇಟಲಿ ಮತ್ತು ತೈವಾನ್, ಇತರೆ ದೇಶಗಳಿಗೆ ರಫ್ತಾಗುತ್ತಿದ್ದ ಗ್ರಾನೈಟ್ ಮಾರುಕಟ್ಟೆಯಲ್ಲಿ ಬೇಡಿಕೆಯು ಕುಸಿದಿರುತ್ತದೆ ಹಾಗೂ ಉಕ್ರೇನ್ ಮತ್ತು ರಷ್ಯಾ ಯುದ್ಧದಿಂದ ರಫ್ತಿನ ಮಾರುಕಟ್ಟೆಯಲ್ಲಿ ಕರಿಕಲ್ಲಿನ ಬೇಡಿಕೆಯು ಕುಸಿದಿರುತ್ತದೆ.
- ಕರಿಕಲ್ಲಿನ ರಫ್ತಿನ ಪ್ರಮಾಣವು ಶೇಕಡ.10% ರಿಂದ 15% ರಷ್ಟು ಕುಸಿದಿದ್ದು, ಇದರಿಂದ ಸರ್ಕಾರಕ್ಕೆ ಅಂದಾಜು ರೂ.**02.00** ರಿಂದ **03.00** ಕೋಟಿ ರಾಜಧನ ಸಂಗ್ರಹಣೆ ಕುಂಠಿತಗೊಂಡಿರುತ್ತದೆ.

ಸಂಖ್ಯೆ:ಸಿಐ-ಎಂಎಂಎಂ/98/2026

P. P. [signature]

**(ಎಸ್.ಎಸ್.ಮಲ್ಲಿಕಾರ್ಜುನ)**

ಗಣಿ ಮತ್ತು ಭೂವಿಜ್ಞಾನ ಹಾಗೂ

ತೋಟಗಾರಿಕೆ ಸಚಿವರು.